# AKKAMAHADEVI WOMEN'S UNIVERSITY, VIJAYAPURA

…………………………………………………………………………

**DATE: 06-11-2017**

**ಪ್ರಕಟಣೆಯ ಕೃಪೆಗಾಗಿ…………**

ವಿಜಯಪುರ: ಹೂರಣವಿಲ್ಲದೆ ಹೋಳಿಗೆ ಮಾಡಲು ಬರದು, ಕಾರಣವಿಲ್ಲದೆ ಕಾರ್ಯ ಮಾಡಲು ಬರದು. ಹಾಗೆಯೇ ಕನಕದಾಸರ ಜಯಂತಿ ಮಾಡುವುದಕ್ಕೊಂದು ಅರ್ಥವಿದೆ. ಇಂದು ನಾವು ಬದುಕನ್ನು ಹೇಗೆ ಕಟ್ಟಿಕೊಳ್ಳಬೇಕೆಂಬುದನ್ನು ಕನಕದಾಸರಿಂದ ಕಲಿತುಕೊಳ್ಳಬೇಕಾಗಿದೆ ಎಂದು ಕಲಬುರ್ಗಿ ವೀರಮ್ಮ ಗಂಗಶ್ರೀ ಮಹಿಳಾ ಮಹಾವಿಶ್ವವಿದ್ಯಾಲಯದ ಪ್ರಾಂಶುಪಾಲ ಡಾ.ಈಶ್ವರಯ್ಯ ಅಭಿಪ್ರಾಯಪಟ್ಟರು.

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ಜ್ಞಾನಶಕ್ತಿ ಆವರಣದ ಡಾ.ಬಿ.ಆರ್. ಅಂಬೇಡ್ಕರ ಭವನದಲ್ಲಿ ಕನಕ ಅಧ್ಯಯನ ಪೀಠ ಹಾಗೂ ಅಹಲ್ಯಾಬಾಯಿ ಸ್ನಾತ¬ಕೋತ್ತರ ಮಹಿಳಾ ಅಧ್ಯಯನ, ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರ ಇವರ ಸಹಯೋಗದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಸಮಕಾಲೀನ ಸಂದರ್ಭ ಮತ್ತು ಕನಕದಾಸರು ಕುರಿತ ಉಪನ್ಯಾಸ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಾಡಗೌಡರ ಮಗನಾಗಿದ್ದ ಕನಕದಾಸರಿಗೆ ಹಣ, ಆಸ್ತಿ ಎಲ್ಲವೂ ಇದ್ದರೂ ಸಹ ಕೀಳು ಕುಲದವನು ಎಂದು ಹೀಯಾಳಿಸುತ್ತಿದ್ದರು. ಅದನ್ನು ಸಹಿಸಿಕೊಳ್ಳಲಾಗದ ಕನಕ ತನ್ನ ಹದಿಹರಿಯದ ವಯಸ್ಸಿನಲ್ಲಿ ತಂದೆ-ತಾಯಿಯರ ಮರಣದ ನಂತರ ಸನ್ಯಾಸಿ ಜೀವನ ಸ್ವೀಕರಿಸಿದರು ಎಂದು ಅವರು ಹೇಳಿದರು.

ಕನಕದಾಸರು ಬದುಕಿರುವಾಗ ಅವರ ತತ್ವಗಳನ್ನು ಪಾಲಿಸದಿರುವ ಈ ಜನ ಇನ್ನಾದರು ಅವರ ತತ್ವಗಳನ್ನ ಪಾಲಿಸಿ ತಮ್ಮ ಜೀವನವನ್ನು ಉಜ್ವಲವಾಗಿಸಿಕೊಳ್ಳಲಿ ಎಂಬುವುದು ಈ ಜಯಂತಿಯ ಅರ್ಥ. ಅಲ್ಲದೇ ಈ ಜಯಂತಿಯು ಕನಕದಾಸರು ಮಾಡಿದ ಸಾಧನೆಯ ಬಗ್ಗೆ ಹಾಗೂ ಅವರ ಸಾಹಿತ್ಯವನ್ನು ನೆನಪು ಮಾಡಿಕೊಡುತ್ತದೆ ಎಂದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಮಹಿಳಾ ವಿವಿ ಕುಲಪತಿ ಪ್ರೊ.ಸಬಿಹಾ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕನಕ ಅಧ್ಯಯನ ಪೀಠದ ಸಂಯೋಜಕಿ ಪ್ರೊ.ಆರ್. ಸುನಂದಮ್ಮ, ಕುಲಸಚಿವ ಪ್ರೊ.ಎಲ್.ಆರ್.ನಾಯಕ ಹಾಗೂ ವಿವಿಧ ವಿಭಾಗದ

ಡೀನರು, ಬೋಧಕ-ಬೋಧಕೇತರ ಸಿಬ್ಬಂದಿ, ಸಂಶೋಧನಾ ಮತ್ತು ಸ್ನಾತಕೋತ್ತರ ವಿದ್ಯಾರ್ಥಿನಿಯರು ಹಾಗೂ ಮತ್ತಿತರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಸಂಗೀತ ವಿಭಾಗದ ವಿದ್ಯಾರ್ಥಿನಿಯರು ಕನಕನದಾಸರ ಕೀರ್ತನೆ ಹಾಡಿದರು. ಕನಕ ಅಧ್ಯಯನ ಪೀಠದ ಸಂಯೋಜಕಿ ಪ್ರೊ.ಆರ್. ಸುನಂದಮ್ಮ ಸ್ವಾಗತಿಸಿ, ಪ್ರಾಸ್ತಾವಿಕ ನುಡಿಗಳನ್ನಾಡಿದರು. ಅಹಲ್ಯಾಬಾಯಿ ಸ್ನಾತಕೋತ್ತರ ಮಹಿಳಾ ಅಧ್ಯಯನ ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರದ ಅತಿಥಿ ಉಪನ್ಯಾಸಕಿ ಡಾ.ಶಿವಮ್ಮ ನಿರೂಪಿಸಿದರು. ಅಹಲ್ಯಾಬಾಯಿ ಸ್ನಾತಕೋತ್ತರ ಮಹಿಳಾ ಅಧ್ಯಯನ ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರದ ಅತಿಥಿ ಉಪನ್ಯಾಸಕಿ ಶೈಲಾ ಬಳಗಾನೂರ ವಂದಿಸಿದರು.

**ಫೋಟೊ ಕ್ಯಾಪ್ಶನ್ :**

1) **ನಗರದ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ಜ್ಞಾನಶಕ್ತಿ ಆವರಣದ ಡಾ.ಬಿ.ಆರ್. ಅಂಬೇಡ್ಕರ ಭವನದಲ್ಲಿ ಕನಕ ಅಧ್ಯಯನ ಪೀಠ ಹಾಗೂ ಅಹಲ್ಯಾಬಾಯಿ ಸ್ನಾತಕೋತ್ತರ ಮಹಿಳಾ ಅಧ್ಯಯನ, ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರ ಇವರ ಸಹಯೋಗದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಸಮಕಾಲೀನ ಸಂದರ್ಭ ಮತ್ತು ಕನಕದಾಸರು ಕುರಿತ ಉಪನ್ಯಾಸ ಕಾರ್ಯಕ್ರಮವನ್ನು ಕಲಬುರ್ಗಿ ವೀರಮ್ಮ ಗಂಗಶ್ರೀ ಮಹಿಳಾ ಮಹಾವಿಶ್ವವಿದ್ಯಾಲಯದ ಪ್ರಾಂಶುಪಾಲ ಡಾ. ಈಶ್ವರಯ್ಯ ಉದ್ಘಾಟಿಸಿ ಮಾತನಾಡಿದರು.**

2) **ನಗರದ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ಜ್ಞಾನಶಕ್ತಿ ಆವರಣದ ಡಾ.ಬಿ.ಆರ್. ಅಂಬೇಡ್ಕರ ಭವನದಲ್ಲಿ ಕನಕ ಅಧ್ಯಯನ ಪೀಠ ಹಾಗೂ ಅಹಲ್ಯಾಬಾಯಿ ಸ್ನಾತಕೋತ್ತರ ಮಹಿಳಾ ಅಧ್ಯಯನ, ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರ ಇವರ ಸಹಯೋಗದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಸಮಕಾಲೀನ ಸಂದರ್ಭ ಮತ್ತು ಕನಕದಾಸರು ಕುರಿತ ಉಪನ್ಯಾಸ ಕಾರ್ಯಕ್ರಮವನ್ನು ಕಲಬುರ್ಗಿ ವೀರಮ್ಮ ಗಂಗಶ್ರೀ ಮಹಿಳಾ ಮಹಾವಿಶ್ವವಿದ್ಯಾಲಯದ ಪ್ರಾಂಶುಪಾಲ ಡಾ. ಈಶ್ವರಯ್ಯ ಕನಕದಾಸರ ಭಾವಚಿತ್ರಕ್ಕೆ ಪುಷ್ಪ ಸರ್ಮಪಣೆ ಮಾಡಿದರು.**


ಭಕ್ತ ಕನಕದಾಸ
ಅಧ್ಯಕ್ಷತೆ
ಪ್ರೊ. ಸಬಿಹಾ


ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ
"ಸಮಕಾಲೀನ ಸಂದರ್ಭ ಮತ್ತು ಕನಕದಾಸರು"
ಉಪನ್ಯಾಸ ಕಾರ್ಯಕ್ರಮ
ಸಂಪನ್ಮೂಲ ವ್ಯಕ್ತಿ
ಡಾ. ಈಶ್ವರಯ್ಯ
ಅಧ್ಯಕ್ಷತೆ
ಪ್ರೊ. ಸಬಿಹಾ
" I like the Religion that Teaches Liberty, Equality and Fraternity